# ನಿವೇದನೆ

## ಶಿಕ್ಷಣ, ಆದರ್ಶ ಮತ್ತು ಆತ್ಮಬಲ

ಭಾರತೀಯ ಸಮಾಜ ಗುರುವನ್ನು ದೇವರು, ಆಚಾರ್ಯ ದೇವೋಭವ ಎಂದೇ ಪರಿಗಣಿಸಿದೆ. ಹೊಸಗನ್ನಡದ ಸಾಂಸ್ಕೃತಿಕ ಧಾರೆಗಳಲ್ಲಿ ಪ್ರಮುಖವಾದ 'ಮೇಷ್ಟ್ರು ಪರಂಪರೆ'ಯ ಘನತೆಯನ್ನು ಬಿಎಂಶ್ರೀ, ಎ.ಆರ್.ಕೃಷ್ಣಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ, ಕುವೆಂಪು ಅವರಂತಹ ಧೀಮಂತ ಚೇತನಗಳು ಹೆಚ್ಚಿಸಿದ್ದವು. ಆ ಪರಂಪರೆಯ ಕೊಂಡಿಗಳೆಲ್ಲ ಕಳಚಿವೆ.

ನಮ್ಮ ಶೈಕ್ಷಣಿಕ ವಾತಾವರಣ ಅಗಾಧ ಬದಲಾವಣೆಗಳಿಗೆ ತೆರೆದುಕೊಂಡಿದೆ. ಎರಡು ದಶಕಗಳ ಹಿಂದಿನ ಸ್ಥಿತಿಗೂ ಈಗಿರುವ ಪರಿಸ್ಥಿತಿಗೂ ಬಹಳಷ್ಟು ವ್ಯತ್ಯಾಸಗಳಿವೆ. ಆ ಕಾಲದಲ್ಲಿ ಶಾಲೆಗಳಿಗೆ ಇರುತ್ತಿದ್ದ ಸಂಪನ್ಮೂಲ, ಸೌಕರ್ಯ, ಶಿಕ್ಷಕರಿಗಿರುತ್ತಿದ್ದ ಔದ್ಯೋಗಿಕ ತರಬೇತಿಯ ಹಿನ್ನೆಲೆ ಅಷ್ಟಕ್ಕಷ್ಟೇ ಎಂಬಂತಿತ್ತು. ಈಗ ಸಂಪನ್ಮೂಲಕ್ಕೆ ಕೊರತೆ ಇಲ್ಲ. ಶಾಲೆಗಳೇ ಒಂದು ಬಗೆಯ 'ಟಂಕಸಾಲೆ'ಗಳಾಗಿವೆ. ತರಬೇತಿಗೂ ಹೇರಳ ಅವಕಾಶಗಳಿವೆ. ಆದರೆ ಮೇಷ್ಟ್ರುಗಳಲ್ಲಿ ಆಗ ಇದ್ದಂತಹ ಬದ್ಧತೆ ಈಗ ಇಲ್ಲ ಅನಿಸುತ್ತಿದೆ. ಬೋಧನೆಯನ್ನು ಒಂದು ಧರ್ಮವಾಗಿ ಸ್ವೀಕರಿಸಿ ಪಾಲಿಸುವ ಪರಿಪಾಠ ಆಗಿನ ಶಿಕ್ಷಕರಲ್ಲಿತ್ತು. ಈಗ ಹೆಚ್ಚಿನವರಿಗೆ ಅದು ಹೊಟ್ಟೆ ಹೊರೆವ ವೃತ್ತಿ ಮಾತ್ರ ಆಗಿದೆ. ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಆಡಳಿತ ಮಂಡಳಿಗಳ ಧೋರಣೆ ಹಾಗೂ ಕಲಿಯಲು ಬರುವ ವಿದ್ಯಾರ್ಥಿಗಳ ನಡಾವಳಿಯಲ್ಲೂ ಇದೇ ಬಗೆಯ ಸಡಿಲಿಕೆಯನ್ನು ಗುರುತಿಸಬಹುದು. ಹಣ– ಅಂಕಗಳನ್ನು ಕೇಂದ್ರವಾಗಿ ಇರಿಸಿಕೊಂಡ ಮಾರುಕಟ್ಟೆ ಆಧಾರಿತ ಶಿಕ್ಷಣ ವ್ಯವಸ್ಥೆಯಲ್ಲಿ ಗುರು–ಶಿಷ್ಯ ಸಂಬಂಧಗಳು, ಮೌಲ್ಯಗಳು ಸ್ಥಾನಪಲ್ಲಟಗೊಂಡಿವೆ. ಅದರ ನಕಾರಾತ್ಮಕ ಪರಿಣಾಮಗಳು ಈಗ ಹೊರಗೆ ಬರುತ್ತಿವೆ. ಶಾಲೆಗಳಲ್ಲಿ ಮಕ್ಕಳ ಮೇಲೆ ನಡೆಯುತ್ತಿರುವ ಲೈಂಗಿಕ ದೌರ್ಜನ್ಯದಂತಹ ಪ್ರಕರಣಗಳಿಗೆ ಕಾರಣವಾಗಿರಬಹುದಾದ ಅಂಶಗಳೂ ಈ ಪಲ್ಲಟದೊಳಗೇ ಎಲ್ಲೋ ಹುದುಗಿ ಕುಳಿತಿರುವ ಸಾಧ್ಯತೆಗಳಿವೆ.

ಬೆಳಕಿನ ಬೀಜ ಬಿತ್ತುವ ಗುರುವಿಗೆ ನಮ್ಮ ಪರಂಪರೆಯಲ್ಲಿ ದೊಡ್ಡ ಗೌರವ ಇದೆ. ವೇದ, ಉಪನಿಷತ್ತುಗಳು ಗುರುವಿಗೆ ರಾಜಮರ್ಯಾದೆಯನ್ನು ಕಲ್ಪಿಸಿವೆ, ಪರಮಪೂಜ್ಯ ಸ್ಥಾನ ಕೊಟ್ಟಿವೆ. ಭಾರತೀಯ ಸಮಾಜ ಗುರುವನ್ನು ದೇವರು, ಆಚಾರ್ಯ ದೇವೋಭವ ಎಂದೇ ಪರಿಗಣಿಸಿದೆ. ಹೊಸಗನ್ನಡದ ಸಾಂಸ್ಕೃತಿಕ ಧಾರೆಗಳಲ್ಲಿ ಪ್ರಮುಖವಾದ 'ಮೇಷ್ಟ್ರು ಪರಂಪರೆ'ಯ ಘನತೆಯನ್ನು ಬಿಎಂಶ್ರೀ, ಎ.ಆರ್.ಕೃಷ್ಣಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ, ಕುವೆಂಪು ಅವರಂತಹ ಧೀಮಂತ ಚೇತನಗಳು ಹೆಚ್ಚಿಸಿದ್ದವು. ಆ ಪರಂಪರೆಯ ಕೊಂಡಿಗಳೆಲ್ಲ ಕಳಚಿವೆ. ಆ ನೆನಪುಗಳನ್ನು ಮುಂದಿನ ತಲೆಮಾರಿಗೆ ಕೊಂಡೊಯ್ಯುವ ನಿಟ್ಟಿನಲ್ಲಿ ಹೊಸ ತಲೆಮಾರಿನ ಕೆಲವು ಶಿಕ್ಷಕರು ಕ್ರಿಯಾಶೀಲರಾಗಿದ್ದರೂ ಅವರ ಸಂಖ್ಯೆ ತೀರಾ ಕಡಿಮೆ. ಆ ಪರಂಪರೆಯನ್ನು ಮುಂದುವರಿಸುವ ಅಗತ್ಯವನ್ನು ಸಮಾಜ ಮನಗಾಣಬೇಕು. ಅಂತಹ ಕ್ರಿಯಾಶೀಲರನ್ನು ಗುರುತಿಸಿ, ಅವರ ಕೆಲಸಕ್ಕೆ ಮನ್ನಣೆ ನೀಡುವ ಮೂಲಕ ಮಕ್ಕಳನ್ನು ಸಾಂಸ್ಕೃತಿಕವಾಗಿ ಸಶಕ್ತಗೊಳಿಸುವ ಚಟುವಟಿಕೆಗಳಿಗೆ ಪ್ರಜ್ಞಾವಂತ ನಾಗರಿಕರೂ ಕೈಜೋಡಿಸಬೇಕಾದ ಅಗತ್ಯ ಈಗ ಹಿಂದೆಂದಿಗಿಂತಲೂ ಹೆಚ್ಚಿಗೆ ಇದೆ.

ಶಾಲಾ ಹಂತದ ಶಿಕ್ಷಣದ ಅನುಭವಗಳು ಮಕ್ಕಳ ವ್ಯಕ್ತಿತ್ವ ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಅಷ್ಟೇ ಅಲ್ಲ, ಬದುಕಿನ ಕುರಿತ ಅವರ ಧೋರಣೆಗಳನ್ನು ರೂಪಿಸುವಷ್ಟು ಪ್ರಭಾವಶಾಲಿಯೂ ಆಗಿರುತ್ತವೆ. ಆದರೆ ಮಾರ್ಗದರ್ಶನ ಮಾಡಬೇಕಾಗಿದ್ದ ಕೈಗಳು ಮೊದಲಿನಷ್ಟು ಸಶಕ್ತವಾಗಿಲ್ಲ. ಮಕ್ಕಳ ಮುತುವರ್ಜಿ ವಿಚಾರದಲ್ಲಿ ಪೋಷಕರೇನೊ ಈಗ ಹೆಚ್ಚಿನ ಕಾಳಜಿ ವಹಿಸುತ್ತಿದ್ದಾರೆ. ಆದರೆ ವಿದ್ಯಾರ್ಥಿ– ಶಿಕ್ಷಕ ಸಂಬಂಧದಲ್ಲಿ ಬಿರುಕುಗಳು ಕಾಣಿಸುತ್ತಿವೆ. ಆ ಸಂಬಂಧ ಹಿಂದೆ ಇದ್ದಷ್ಟು ಸದೃಢವಾಗಿ ಇಲ್ಲ. ಬೋಧನೆ ಎನ್ನುವುದು ಯಾಂತ್ರಿಕ ಕ್ರಿಯೆಯಾಗಿ ಮಾರ್ಪಟ್ಟಿದೆ. ಅರಿವಿನ ಹುಡುಕಾಟದ ಜಾಗವನ್ನು ನೌಕರಿ ಹುಡುಕಾಟ ಆಕ್ರಮಿಸಿಕೊಂಡಿದೆ ಎಂಬ ಅನುಮಾನಗಳು ಗಟ್ಟಿಗೊಳ್ಳುತ್ತಿವೆ. ಹಾಗೆ ನೋಡಿದರೆ, ಮಕ್ಕಳ ಪಾಲಿಗೆ ನಿಜವಾದ ಆದರ್ಶ ನಾಯಕ ಶಿಕ್ಷಕ. ಮೇಷ್ಟ್ರು ಅನ್ನುವ ಪದ ಅವರ ಮಟ್ಟಿಗೆ ಗೌರವದ ಸಂಕೇತ. ಆ ವಿಶ್ವಾಸ ಈಗ ಎಷ್ಟರಮಟ್ಟಿಗೆ ಉಳಿದಿದೆಯೋ ಗೊತ್ತಿಲ್ಲ. ಆದರೆ ಅದಕ್ಕೆ ಕುಂದು ಒದಗುವ ವಿದ್ಯಮಾನಗಳು ಘಟಿಸುತ್ತಿರುವುದಂತೂ ದಿಟ. ಹಣ ಗಳಿಸುವುದನ್ನೇ ಧರ್ಮ ಎಂದು ಭಾವಿಸಿರುವ ಈ ಕಾಲಘಟ್ಟದಲ್ಲಿ ಶಿಕ್ಷಕ ಆದರ್ಶವಾಗಿ ರೂಪುಗೊಳ್ಳಲು ಹೆಚ್ಚಿನ ಶ್ರಮ ಹಾಕಬೇಕಾಗಿದೆ. ಹತ್ತು ಹಲವು ಬಗೆಯ ಪ್ರತಿಕೂಲಗಳನ್ನು ಮೀರುವ ಅತ್ಮಬಲ ಪ್ರದರ್ಶಿಸಬೇಕಿದೆ. ಈ ಕಾಲದ ಶಿಕ್ಷಕರಲ್ಲಿ ಎಷ್ಟು ಮಂದಿ ಅಂತಹ ಇಚ್ಛಾಶಕ್ತಿ ಪ್ರದರ್ಶಿಸಬಲ್ಲರು?

■ ಎನ್.ಉದಯಕುಮಾರ್



ಈಶ್ವರ್